ಓ ಎಸ್ **: 104/2017** ಪಿ. ಡಬ್ಲ್ಯೂ-**1**

ಸಾಕ್ಷಿಯನ್ನು ದಿಃ **05.10.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ

ನಾನು ಅವಿದ್ಯಾವಂತ. ನನ್ನ ತಾತನ ಹೆಸರು ಚೆನ್ನಬಸಪ್ಪ. ಅವರಿಗೆ ಮೂರು ಜನ ಮಕ್ಕಳು. ಅವರುಗಳು ನನ್ನ ತಂದೆ ಮಲ್ಲಪ್ಪ, ಮಲ್ಲಿಕಾರ್ಜುನಪ್ಪ, ರಂಗರಾಜಪ್ಪ. ನನ್ನ ತಾತನಿಗೆ ಸೇರಿದ ಒಟ್ಟು ಕುಟುಂಬದ ಆಸ್ತಿಗಳು ಇವೆ. ಸದರಿ ಆಸ್ತಿಯಲ್ಲಿ ನನ್ನ ತಂದೆಗೆ ಒಂದು ಎಕರೆ ಜಮೀನು ಬಂದಿರುತ್ತದೆ ಅದರ ಸರ್ವೆ ನಂಬರ್ ಗೊತ್ತಿರುವುದಿಲ್ಲ. ಇದನ್ನು ಹೊರತುಪಡಿಸಿ 13 ಗುಂಟೆ ಮತ್ತು 16 ಗುಂಟೆ ಜಮೀನು ನನ್ನ ತಂದೆಗೆ ಭಾಗ ಬಂದಿರುತ್ತದೆ. ಸದರಿ ಆಸ್ತಿಗಳ ಸರ್ವೆ ನಂಬರ್ ಆಗಲೀ ಅಸ್ತಿ ನಂಬರ್ ಆಗಲೀ ನನಗೆ ಗೊತ್ತಿರುವುದಿಲ್ಲ.

ನನ್ನ ತಂದೆಗೆ ಮೂರು ಜನ ಮಕ್ಕಳು. ಅವರುಗಳೆಂದರೆ ನಾನು, ಪ್ರಭಾಮಣಿ ಮತ್ತು ಸುರೇಶ. ಸದರಿ ಪ್ರಭಾಮಣಿಯನ್ನು ಪಕ್ಷಗಾರರಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ. ನನ್ನ ತಂದೆ ಜೀವಂತವಾಗಿದ್ದಾಗ ಒಂದು ಎಕರೆ 16 ಗುಂಟೆ, ಒಂದೂವರೆ ಎಕರೆ, 13 ಗುಂಟೆ ಆಸ್ತಿಗಳು ಇತ್ತು. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಲು ಯಾವುದೇ ತೊಂದರೆ ಇರಲಿಲ್ಲ. ಈ ದಾವೆಯನ್ನು ಒಂದೂವರೆ ಎಕರೆ ಆಸ್ತಿ ಮೇಲೆ ಮಾತ್ರ ಸಲ್ಲಿಸಿರುತ್ತೇನೆ. ಅದರ ಸರ್ವೆ ನಂಬರ್, ವಿಸ್ತೀರ್ಣ, ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ಒಂದು ಮನೆಯನ್ನು ಹೊರತುಪಡಿಸಿ ಎಲ್ಲಾ ಆಸ್ತಿಗಳು ವಿಭಾಗ ಆಗಿರುತ್ತದೆ. ಈ ದಾವೆಯಲ್ಲಿ ಅದನ್ನು ಸೇರಿಸಿರುವುದಿಲ್ಲ ಕಾರಣ ಈ ದಾವೆಗೂ ಸದರಿ ಮನೆಗೂ ಸಂಬಂಧವಿಲ್ಲ. ನಮ್ಮ ಊರಿನ ಮುಖಂಡರ ಮುಂದೆ ನನ್ನ ತಂದೆ, ತಮ್ಮ ಮತ್ತು ನನ್ನ ಮಧ್ಯ ಭಾಗ ಆಗಿರುತ್ತದೆ. ಸದರಿ ವಿಭಾಗದಲ್ಲಿ ನನ್ನ ತಂಗಿಗೆ ಯಾವುದೇ ಭಾಗ ಕೊಟ್ಟಿರುವುದಿಲ್ಲ ಕಾರಣ ತನಗೆ ಯಾವುದೇ ಭಾಗ ಬೇಡ ಎಂದು ಹೇಳಿರುತ್ತಾಳೆ. ಆ ಸಂಬಂಧ ನನ್ನ ತಂಗಿ ಯಾವುದೇ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುವುದಿಲ್ಲ. ಬಾಯಿ ಮಾತಿನ ಮುಖಾಂತರ ಹೇಳಿರುತ್ತಾಳೆ. ನಾನು ಹಾಜರುಪಡಿಸಿರುವ ನಿಪಿ.6 ರಂತೆ ಪಂಚಾಯಿತಿ ಪಾಲು ಪಾರಿಕತ್ತಿಗೆ ನನ್ನ ತಂಗಿ ಸಹಿ ಮಾಡಿರುತ್ತಾಳೆ. ಸದರಿ ದಾಖಲೆಗೆ ನನ್ನ ತಂಗಿ ಸಹಿ ಮಾಡಿರುವುದಿಲ್ಲ ಸಹಿ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.6 ರ ದಾಖಲೆಯಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ

ಗುರುತಿಸಿರುತ್ತಾರೆ ಅದರಲ್ಲಿ ತನ್ನ ತಂಗಿ ಸಹಿಯನ್ನು ಗುರುತಿಸಲು ಆಗುವುದಿಲ್ಲ ಎಂದು ಹೇಳಿರುತ್ತಾರೆ. ನಿಪಿ.6 ನ್ನು ನಾನು ಸೃಷ್ಟಿ ಮಾಡಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಯಲ್ಲಿ ನನ್ನ ತಂಗಿಗೂ ಸಹ ಭಾಗ ಇದೆ ಎಂದರೆ ಸಾಕ್ಷಿ ಮುಂದುವರಿದು ತನ್ನ ತಂಗಿ ಭಾಗ ಬೇಡ ಎಂದು ಹೇಳಿರುತ್ತಾಳೆ ಎಂದು ನುಡಿಯುತ್ತಾರೆ.

ನಿಪಿ.6 ರಲ್ಲಿ ಒಂದೂವರೆ ಎಕರೆ, 13 ಗುಂಟೆ ಮತ್ತು ಒಂದು ನಿವೇಶನವನ್ನು ವಿಭಾಗ ಮಾಡಿಕೊಂಡಿರುತ್ತೇವೆ. ಈಗ ನನ್ನ ತಂದೆ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ. ಈಗಾಗಲೇ ಮಾರಾಟ ಮಾಡಿರುತ್ತಾರೆ. ನನ್ನ ತಂದೆ ಪುಟ್ಟಸ್ವಾ ಮಿ ಎಂಬುವವರಿಗೆ ಒಂದು ಎಕರೆ 16 ಗುಂಟೆ ಮಾರಾಟ ಮಾಡಿರುತ್ತಾರೆ. ಯಾವಾಗ ಮಾರಾಟ ಮಾಡಿದ್ದಾರೆ ಎಂದು ನೆನಪಿಲ್ಲ. ಸದರಿ ವಿಚಾರವನ್ನು ವಾದಪತ್ರವನ್ನು ಬರೆಯಲು ತೊಂದರೆ ಇರಲಿಲ್ಲ. ಆ ಸಂಬಂಧ ದಾಖಲೆಯನ್ನು ಹಾಜರುಪಡಿಸುತ್ತೇವೆ.

ನನ್ನ ತಂದೆ ಜೀವಂತವಾಗಿದ್ದಾಗ ಮಾದಾಪುರ ಮತ್ತು ದೊಡ್ಡನಹುಂಡಿ ಗ್ರಾಮ ಎರಡರಲ್ಲೂ ವಾಸವಿದ್ದರು. ನಾನು ಮಾದಾಪುರದಲ್ಲಿ ವಾಸವಾಗಿದ್ದೇನೆ. ನನ್ನ ತಂದೆ ಹೆಸರಿನಲ್ಲಿದ್ದ ಮನೆ ನಮ್ಮ ಪಿತ್ರಾರ್ಜಿತ ಮನೆ ಈಗ ನನ್ನ ಭಾಗಕ್ಕೆ ಬಂದಿರುತ್ತದೆ. ಸದರಿ ಮನೆಯಲ್ಲಿ ನಾನು ವಾಸವಿದ್ದೇನೆ ನನ್ನ ತಮ್ಮನಿಗೆ ಬಂದಿರುವ ಮನೆ ಬೀಗ ಹಾಕಿರುತ್ತದೆ. ನನಗೆ ನೀಡಿದ ಮನೆ ಎರಡು ಅಂಕಣ. ಆ ಸಂಬಂಧ ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ವಾಸವಿರುವ ಮನೆಯನ್ನು ಎರಡು ಭಾಗ ಮಾಡಿ ನನ್ನ ತಮ್ಮನಿಗೆ ನೀಡಿರುತ್ತಾರೆ. ನಿಪಿ.6 ರಲ್ಲಿ ಆಸ್ತಿಗಳು ವಿಭಾಗ ಆದ ಸಂದರ್ಭದಲ್ಲೆ ನಾವು ವಾಸವಿರುವ ಮನೆ ಸಹ ವಿಭಾಗ ಆಗಿರುತ್ತದೆ. ನಿಪಿ.6 ರಲ್ಲಿ ನಾವು ವಾಸವಿರುವ ಮನೆಯನ್ನು ಸೇರಿಸಿರುವುದಿಲ್ಲ. ನಾನು ಹೇಳುತ್ತಿರುವುದೆಲ್ಲಾ ಸುಳ್ಳು ನಿಪಿ.6 ರಂತೆ ಯಾವುದೇ ವಿಭಾಗ ಆಗಿರುವುದಿಲ್ಲ ನಾನು



ವಾಸವಿರುವ ಮನೆ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಾಯುವ ಮುಂಚೆ ಸುಮಾರು 6-7 ವರ್ಷಗಳಿಂದ ಪ್ರತಿವಾದಿ ಮನೆಯಲ್ಲೆ ವಾಸವಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ಇಬ್ಬರ ಮನೆಯಲ್ಲೂ ವಾಸವಿದ್ದರು. ನನ್ನ ತಂದೆಗೆ ಯೋಗಕ್ಷೇಮ ನೋಡಿರುವುದಿಲ್ಲ ಎಂದರೆ ಸಾಕ್ಷಿ ಮುಂದುವರಿದು

ಇಬ್ಬರು ಸೇರಿ ನೋಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಂದೆ 15-20 ವರ್ಷಗಳಿಂದ ಅಸ್ತಮಾ ಖಾಯಿಲೆ ಇತ್ತು. ನನ್ನ ತಂದೆಯ ವೈದ್ಯಕೀಯ ಖರ್ಚು ವೆಚ್ಚಗಳನ್ನು ಪ್ರತಿವಾದಿ ಮಾಡುತ್ತಿದ್ದ ಎಂದರೆ ಸರಿಯಲ್ಲ ಇಬ್ಬರೂ ಸೇರಿ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ.

ನನ್ನ ತಂದೆ ಆಸ್ತಿ ಖರೀದಿ ಮಾಡಿರುವ ಬಗ್ಗೆ ನನಗೆ ತಿಳುವಳಿಕೆ ಇದೆ. ಸರ್ವೆ ನಂಬರ್ ಹೇಳಲು ಆಗುವುದಿಲ್ಲ. ಪ್ರತಿವಾದಿ ನಮ್ಮ ತಂದೆ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದ ಕಾರಣ ಅವರು ಖರೀದಿ ಮಾಡಿದ ಆಸ್ತಿಯನ್ನು ಪ್ರತಿವಾದಿಗೆ ವಿಲ್ ಮುಖಾಂತರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಮಾಡಲು ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ